ದಿನಾಂಕಃ 03-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿವೆ ಮತ್ತು ಅದಕ್ಕೆ ನಾನು ನನ್ನ ಸಹಿ ಮಾಡಿರುತ್ತೇನೆ.

1. ದಿಃ 09.04.2015 ರ ಹುದಲಿ ಗ್ರಾಮದ ಸರ್ವೆ ನಂ.68/13 ರ ನೊಂದಾಯಿತ ಖರೀದಿ ಪತ್ರದ ದೃಢಿಕೃತ ನಕಲು ನಿಪಿ-1
2. ದಿಃ 09.06.2016 ರ ಹುದಲಿ ಗ್ರಾಮದ ಸರ್ವೆ ನಂ.69/6 ರ ನೊಂದಾಯಿತ ಖರೀದಿ ಪತ್ರದ ದೃಢಿಕೃತ ನಕಲು ನಿಪಿ-2
3. ದಿಃ 09.06.2015 ರ ಹುದಲಿ ಗ್ರಾಮದ ಸರ್ವೆ ನಂ.69/3 ರ ನೊಂದಾಯಿತ ಖರೀದಿ ಪತ್ರದ ದೃಢಿಕೃತ ನಕಲು ನಿಪಿ-3
4. ದಿಃ 21.12.2015 ರ ಹುದಲಿ ಗ್ರಾಮದ ಸರ್ವೆ ನಂ.65/1 ರ ನೊಂದಾಯಿತ ಖರೀದಿ ಪತ್ರದ ದೃಢಿಕೃತ ನಕಲು ನಿಪಿ-4
5. ದಿಃ 21.12.2015 ರ ಹುದಲಿ ಗ್ರಾಮದ ಸರ್ವೆ ನಂ.69/1 ರಿಂದ 69/5 ರ ನೊಂದಾಯಿತ ಖರೀದಿ ಪತ್ರದ ದೃಢಿಕೃತ ನಕಲು ನಿಪಿ-5
6. ಬೆಳೆಯ ಇಳುವರಿ ಪ್ರಮಾಣ ಪತ್ರದ ದೃಢಿಕೃತ ನಕಲು ನಿಪಿ-6
7. ಎಲ್ಲಾ ತರಕಾರಿ ಹಣ್ಣುಗಳ 2012 ರಿಂದ 2016ನೇ ಸಾಲಿನ ದರಗಳ ಪಟ್ಟಿಯ ದೃಢಿಕೃತ ನಕಲು ನಿಪಿ-7
8. 2006 ರಿಂದ 2017ನೇ ವರೆಗಿನ ಕಬ್ಬಿನ ದರ ಪಟ್ಟಿಯ ದೃಢಿಕೃತ ನಕಲು ನಿಪಿ-8
9. ಕಬ್ಬಿನ ಇಳುವರಿ ಪ್ರಮಾಣ ಪತ್ರದ ದೃಢಿಕೃತ ನಕಲು ನಿಪಿ-9

10. ಹುದಲಿ ಗ್ರಾಮದಲ್ಲಿ ದಿನಾಂಕ 28.12.2014 ರಿಂದ 28.12.2017 ರವೆಗಿನ ಖುಷ್ಕಿ ಜಮೀನುಗಳ ಮಾರಾಟದ ಬಗ್ಗೆ ಉಪನೊಂದಾವಣೆ ಅಧಿಕಾರಿ ಇವರು ಕೊಟ್ಟ ಅಂಕಿಅಂಶಗಳ ವಿವರದ ದೃಢಿಕೃತ ನಕಲು ನಿಪಿ-10

11. ಹುದಲಿ ಗ್ರಾಮದ LAQSR No.7/2006-07ರ ಭೂಸ್ವಾಧೀನ ಪಡಿಸಿಕೊಂಡ ಜಮೀನುಗಳ ಸಂಯುಕ್ತ ಮೊಜಣಿ ಪತ್ರಿಕೆಯ ದೃಢಿಕೃತ ನಕಲು ನಿಪಿ-11

12. ಕಾರ್ಯನಿರ್ವಾಹಕ ಅಭಿಯಂತರರು ಕನಿನಿನಿ ಹಿಡಕಲ್ ಡ್ಯಾಂ ಇವರು ಕೊಟ್ಟ ಬಳ್ಳಾರಿ ಅಣೆಕಟ್ಟು ಯೋಜನೆಯ ಬಗ್ಗೆ ಕೊಟ್ಟ ಮಾಹಿತಿಯ ದೃಢಿಕೃತ ನಕಲು ನಿಪಿ-12

13. ನನ್ನ ಗಂಡ ನನ್ನ ಮಾಡಿಕೊಟ್ಟ ಎಸ್.ಪಿ.ಎ ಯ ನೊಟರೀಕೃತಯಥ ನಕಲು ನಿಪಿ-13

<u>ಪಾಟೀ ಸವಾಲುಃ 1ನೇ ಎದುರುದಾರ ಪರ ಮಾನ್ಯ ಡಿಜಿಪಿ ವಕೀಲರಿಂದಃ</u>

ನನ್ನ ಗಂಡನಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನನಗೆ ಈ ಕೇಸಿನ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಗಂಡನು ನನಗೆ ಯಾವುದೇ ಎಸ್.ಪಿ.ಎ ಮಾಡಿ ಕೊಡದೇ ಇದ್ದರೂ ನಾನು ಆತನ ಪರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.ಈ ಕೇಸಿನಲ್ಲಿ ನನಗೆ ಸಾಕ್ಷಿ ನುಡಿಯಲು ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

ನನ್ನ ಆಧಾರ ಕಾರ್ಡ್ಇದೆ ಎಂದರೆ ನಿಜ. ಅದನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇಲ್ಲ. ನಮ್ಮ ಭೂಸ್ವಾ ಧೀನ ಪಡಿಸಿಕೊಂಡ ಜಮೀನಿನ ಉತಾರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ಓದಿ ತಿಳಿದಿರುತ್ತೇನೆ. ಹುದಲಿಯಿಂದ ಧರನಟ್ಟಿ ಗ್ರಾಮಕ್ಕೆ 10 ಕಿ.ಮೀ ದೂರವಾಗುತ್ತದೆ ಎಂದರೆ ನಿಜ. ಹುದಲಿಯಿಂದ ಧರನಟ್ಟಿಗೆ ಹೋಗಬೇಕಾದರೆ ರಾಮಾಪೂರ ಎಂಬ ಊರು ಸಿಗುತ್ತದೆ

ಎಂದರೆ ನಿಜ. ಧರನಟ್ಟಿಯಲ್ಲಿ ಗುಡ್ಡ ಇದೆ ಎಂದರೆ ನಿಜ. ರಾಮಾಪೂರ ಮತ್ತು ಧರನಟ್ಟಿಯಲ್ಲಿರುವ ಎರಡು ಗುಡ್ಡಗಳ ನಡುವೆ ಬಳ್ಳಾರಿ ನಾಲಾ ಇದೆ ಎಂದರೆ ನಿಜ. ನಮ್ಮ ಭೂಸ್ವಾಧೀನ ಪಡಿಸಿಕೊಂಡ ಜಮೀನು ಧರನಟ್ಟಿಗೆ ಹೋಗುವ ರಸ್ತೆಯ ಬದಿಯಲ್ಲಿ ಇದೆ. ನಮ್ಮ ಭೂಸ್ವಾಧೀನ ಪಡಿಸಿಕೊಂಡ ಜಮೀನು ರಸ್ತೆಯಿಂದ ಒಳಗೆ ಇದೆ ಎಂದರೆ ಸರಿಯಲ್ಲ. ಸರ್ವೆ ನಂ.80 ಇದು ಗುಡ್ಡಗಾಡ ಪ್ರದೇಶದಲ್ಲಿ ಇದೆ ಎಂದರೆ ಸರಿಯಲ್ಲ. ಸರ್ವೆ ನಂ.80 ರ ಸುತ್ತಮುತ್ತ ಇರುವ ಜಮೀನುಗಳಾದ ಸರ್ವೆ ನಂ.75, 80, 81 ರ ಜಮೀನುಗಳು ಗುಡ್ಡಗಾಡಿನಲ್ಲಿ ಇರುವುದರಿಂದ ಅದರಲ್ಲಿ ಯಾವುದೇ ಬೆಳೆ ಬೆಳೆಯಾಲಗುತ್ತಿಲ್ಲ ಎಂದರೆ ಸರಿಯಲ್ಲ. ನಮ್ಮ ಭೂಸ್ವಾಧೀನ ಪಡಿಸಿಕೊಂಡ ಜಮೀನು ಸರ್ವೆ ನಂ.80 ಇದು ಯಾವುದೇ ಬೆಳೆ ಬೆಳೆಯಲು ಯೋಗ್ಯವಲ್ಲದ ಜಮೀನು ಎಂದರೆ ಸರಿಯಲ್ಲ. ಸರ್ವೆ ನಂ.80 ರಲ್ಲಿ ಯಾವ ಬೆಳೆಗಳನ್ನು ಬೆಳೆಯಲಾಗುತ್ತಿತ್ತು ಎಂದು ಪ್ರತಿ ವರ್ಷ ಅದರ ಮಾಹಿತಿಯನ್ನು ನಾವು ತಲಾಟಿಗೆ ನೀಡುತ್ತಿದ್ದೇವು. ಆ ರೀತಿ ತಲಾಟಿಗೆ ಮಾಹಿತಿ ಕೊಟ್ಟ ಬಗ್ಗೆ ದಾಖಲೆಗಳನ್ನು ನಿಮಗೆ ಹಾಜರು ಮಾಡಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ತೊಂದರೆ ಇಲ್ಲ ಎನ್ನುತ್ತಾರೆ. ಆ ದಾಖಲೆಯನ್ನು ನಾನು ಬೇಕಾದರೆ ನ್ಯಾಯಾಲಯಕ್ಕೆ ಹಾಜರು ಮಾಡುತ್ತೇನೆ. ನಾನು ಭೂಸ್ವಾಧೀನ ಪಡಿಸಿಕೊಂಡ ಜಮೀನು ಸರ್ವೆನಂ.76 ರಲ್ಲಿ ಯಾವುದೇ ಬೆಳೆಗಳನ್ನು ಬೆಳೆಯದೇ ಇದುದ್ದರಿಂದ ಮತ್ತು ಈ ಬಗ್ಗೆ ಯಾವುದೇ ಮಾಹಿತಿಯನ್ನು ತಲಾಟಿಗೆ ನೀಡದೇ ಇದುದ್ದರಿಂದ ಆ ಕಾರಣದಿಂದ ನ್ಯಾಯಾಲಯಕ್ಕೆ ಉತಾರ ಮತ್ತು ತಲಾಟಿಗೆ ಕೊಟ್ಟ ಮಾಹಿತಿ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

ಹುದಲಿಯಿಂದ ಬೆಳಗಾವಿಗೆ 25 ಕಿ.ಮೀ ದೂರವಾಗುತ್ತದೆ ಎಂದರೆ ನಿಜ. ಸಾಕ್ಷಿಯು ನಮ್ಮ ಜಮೀನಿನಿಂದ ಬೆಳಗಾವಿಗೆ 15 ಕಿ.ಮೀ ದೂರ ಇರುವುದು ಎನ್ನುತ್ತಾರೆ. ನಮ್ಮ ಭೂಸ್ವಾಧೀನ ಪಡಿಸಿಕೊಂಡ ಜಮೀನು ಬೆಳಗಾವಿಯಿಂದ 35 ಕಿ.ಮೀ ದೂರವಾಗುತ್ತದೆ ಎಂದರೆ ಸರಿಯಲ್ಲ. ನಮ್ಮ ಜಮೀನು ಬೆಳಗಾವಿಗೆ 15 ಕಿ.ಮೀ ಇದೆ ಎಂದು ತೋರಿಸಲು

ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ಸಾಕ್ಷಿಗೆ ನಿಪಿ 1 ರಿಂದ 12 ದಾಖಲೆಗಳನ್ನು ನೀಡಿ ಅವುಗಳಲ್ಲಿ ಅಂತಹ ಯಾವ ದಾಖಲೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ. ಬೆಳಗಾವಿಗೆ ನಮ್ಮ ಜಮೀನಿನಿಂದ ಎಷ್ಟು ದೂರವಿದೆ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರು ಮಾಡದೇ ಇದ್ದರೂ 15 ಕಿ.ಮೀ ದೂರವೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಮ್ಮ ಹೊಲಕ್ಕೆ ಹೋಗಬೇಕಾದರೆ ಹುದಲಿಯಿಂದ ರಾಮಾಪೂರಕ್ಕೆ ಬಂದು ಒಳಗಡೆ ಹೋಗುವ ಒಂದೇ ರಸ್ತೆ ಇರುವುದು ಎಂದರೆ ಸಾಕ್ಷಿಯು ಬೇರೆ ಒಳರಸ್ತೆ ಇದೆ ಎನ್ನುತ್ತಾರೆ. ನಮ್ಮ ಭೂಸ್ವಾಧೀನ ಪಡಿಸಿಕೊಂಡ ಜಮೀನು ಕಬಲಾಪೂರ ಮಾಸ್ತಿಹೊಳೆಯಿಂದ ಇನ್ನೊಂದು ರಸ್ತೆ ಇದೆ. ಕಬಲಾಪೂರ-ಮಾಸ್ತಿಪೂರ ರಸ್ತೆಯು ಸಿದ್ದನಹಳ್ಳಿ ಕೊನೆಗೊಳ್ಳುತ್ತದೆ ಎಂದರೆ ಸರಿಯಲ್ಲ.

ನನ್ನ ಬ್ಯಾಂಕ ಖಾತೆ ಇದೆ ಎಂದರೆ ನಿಜ. ನಮ್ಮ ಜಮೀನಿನಲ್ಲಿ ಬೆಳೆದ ಕಬ್ಬನ್ನು ಸಂಗಮ ಕಾರ್ಖಾನೆಗೆ ಕಳುಹಿಸುತ್ತಿದ್ದೆನು. ನಮ್ಮ ಕಬ್ಬನ್ನು ಕಾರ್ಖಾನೆಗೆ ಕಳುಹಿಸಿದ ಬಗ್ಗೆ ದಾಖಲೆಗಳನ್ನು ನನಗೆ ಹಾಜರು ಮಾಡಲು ತೊಂದರೆ ಇಲ್ಲ. ಸಕ್ಕರೆ ಕಾರ್ಖಾನೆಯವರು ಕಬ್ಬಿನ ಬಿಲ್ಲನ್ನು ಬ್ಯಾಂಕ ಖಾತೆಗೆ ಜಮಾ ಮಾಡುತ್ತಾರೆ ಎಂದರೆ ನಿಜ. ನನ್ನ ಬ್ಯಾಂಕ ಖಾತೆಯ ದಾಖಲೆಗಳನ್ನು ನನಗೆ ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇಲ್ಲ. ಸರ್ವೆ ನಂ.80 ರಲ್ಲಿ ನಾನು ಯಾವತ್ತು ಕಬ್ಬು ಬೆಳೆಯದೇ ಇದುದ್ದರಿಂದಲೇ ಆ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ.

ಹುದಲಿಯು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಹಳ್ಳಿ ಎಂದರೆ ನಿಜ. ಹುದಲಿ ಇದು ಗೋಕಾಕ-ಬೆಳಗಾವಿ ಬೈಪಾಸ್ ರಸ್ತೆಯಿಂದ ಹೋಗುವ ಒಳಗಡೆ ರಸ್ತೆಯಲ್ಲಿ ಇದೆ ಎಂದರೆ ನಿಜ. ಹುದಲಿಗೆ ಹೋಗಲು ಗೋಕಾಕ-ಬೆಳಗಾವಿ ಮುಖ್ಯ ರಸ್ತೆ ಸಿಗುತ್ತದೆ ಎಂದರೆ ನಿಜ. ಗೋಕಾಕ-ಬೆಳಗಾವಿ ರಸ್ತೆಯು ಜಿಲ್ಲಾ ಮುಖ್ಯ ರಸ್ತೆ ಎಂದರೆ ನಿಜ. ನಿಮ್ಮ ಭೂಸ್ವಾಧೀನ ಪಡಿಸಿಕೊಂಡ ಜಮೀನಿಗೆ ತಾಗಿ ರಾಜ್ಯ ಹೆದ್ದಾರಿ ಇಲ್ಲ ಎಂದರೆ ಸಾಕ್ಷಿಯು ಜಮೀನಿಗೆ ತಾಗಿಲ್ಲ

ಆದರೆ ಸ್ವಲ್ಪ ಹತ್ತಿರದಲ್ಲಿದೆ. ನಿಮ್ಮ ಭೂಸ್ವಾ ಧೀನ ಪಡಿಸಿಕೊಂಡ ಜಮೀನಿನ ಹತ್ತಿರ ಯಾವ ರಾಜ್ಯ ಹೆದ್ದಾರಿ ಇರುವುದು ಎಂದರೆ ಸಾಕ್ಷಿಯು ಗೋಕಾಕ ಹೆದ್ದಾರಿ ಇರುತ್ತದೆ ಎನ್ನುತ್ತಾರೆ ಆ ರೀತಿ ರಾಜ್ಯ ಹೆದ್ದಾರಿ ಇದೆ ಎಂದು ತೋರಿಸಲು ನಕಾಶೆಯನ್ನು ಹಾಜರು ಮಾಡಲು ನನಗೆ ತೊಂದರೆ ಇಲ್ಲ. ನಮ್ಮ ಭೂಸ್ವಾ ಧೀನ ಪಡಿಸಿಕೊಂಡ ಜಮೀನಿಗೆ ಹೋಗಲು ಕಾಲು ದಾರಿಯು ಸಹ ಇಲ್ಲದೇ ಇದ್ದರೂ ಸಹ ಜಮೀನಿನ ಹತ್ತಿರ ರಾಜ್ಯ ಹೆದ್ದಾರಿ ಇದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಹುದಲಿ ಗ್ರಾಮದಲ್ಲಿ 10ನೇ ತರಗತಿವರೆಗೆ ಓದುವ ಶಾಲೆ ಇದೆ. ಹುಲಿಯ ವಿದ್ಯರ್ಥಿಗಳು ಕಾಲೇಜಿಗೆ ಬರಬೇಕಾದರೆ ಅಂಕಲಗಿಗೆ ಮತ್ತು ಬೆಳಗಾವಿಗೆ ಬರಬೇಕಾಗುತ್ತದೆ ಎಂದರೆ ನಿಜ. ಹುದಲಿಯಿಂದ 1 ಕಿ.ಮೀ ಅಂತರದಲ್ಲಿ ಸುಳದಾಳ ರೇಲ್ವೆ ಟ್ರಾಕ ಇದೆ ಎಂದರೆ ನಿಜ. ನಿಮ್ಮ ಜಮೀನಿನಿಂದ ಸುಳದಾಳ ರೇಲ್ವೇ ಸ್ಟೇಶನ 10 ಕಿ.ಮೀ ದೂರವಾಗುತ್ತದೆ ಎಂದರೆ ಸಾಕ್ಷಿಯು 4 ಕಿ.ಮೀ ದೂರವಾಗುತ್ತದೆ ಎನ್ನುತ್ತಾರೆ. ನಿಮ್ಮ ಜಮೀನಿನಿಂದ ಸುಳೇಭಾವಿಗೆ 15 ಕಿ.ಮೀ ದೂರವಾಗುತ್ತದೆ ಎಂದರೆ ಸಾಕ್ಷಿಯು 12 ಕಿ.ಮೀ ದೂರವಾಗುತ್ತದೆ ಎನ್ನುತ್ತಾರೆ. ನಮ್ಮ ಭೂಸ್ವಾಧೀನ ಪಡಿಸಿಕೊಂಡಿರುವ ಜಮೀನಿನ ಸುತ್ತಮುತ್ತ ಬೇರೆ ಜಮೀನುಗಳು ಇವೆ ಎಂದರೆ ನಿಜ.ಅಲ್ಲಿ ಸುತ್ತಮುತ್ತಲಿನ ಜಮೀನಿನವರು ಒಕ್ಕಲುತನ ಮಾಡುತ್ತಾರೆ ಎಂದರೆ ನಿಜ. ನಮ್ಮ ಭೂಸ್ವಾ ಧೀನ ಪಡಿಸಿಕೊಂಡ ಜಮೀನಿನ ಕಿಮ್ಮತ್ತು ಎಕರೆಗೆ 60 ಲಕ್ಷ ಆಗುತ್ತದೆ ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ಭೂಸ್ವಾಧೀನ ಪಡಿಸಿಕೊಂಡ ಜಮೀನಿನಲ್ಲಿ ಬೆಳೆಯವ ಕಾಯಿಪಲ್ಲೆಗಳನ್ನು ಎಪಿಎಂಸಿಯಲ್ಲಿ ಮಾರಾಟ ಮಾಡುತ್ತಿದ್ದೇನು ಅದರ ಬಿಲ್ಲುಗಳನ್ನು ಹಾಜರು ಮಾಡಲು ನನಗೆ ತೊಂದರೆ ಇಲ್ಲ. ನಮ್ಮ ಭೂಸ್ವಾ ಧೀನ ಪಡಿಸಿಕೊಂಡ ಜಮೀನಿನಲ್ಲಿ ಯಾವುದೇ ಬೆಳೆಗಳನ್ನು ಬೆಳೆಯದೇ ಇದುದ್ದರಿಂದಲೇ ನಾನು ಯಾವುದೇ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

ನಮ್ಮ ಭೂಸ್ವಾ ಧೀನ ಪಡಿಸಿಕೊಂಡ ಜಮೀನಿನಲ್ಲಿ ನೀರಾವರಿ ಬೆಳೆ ಬೆಳೆಯಲು ವಿದ್ಯುತ್

ಕನೇಕ್ಷನ ಇತ್ತು. ಆ ರೀತಿ ವಿಧ್ಯುತ್ ಕನೇಕ್ಷನ ಇತ್ತು ಎಂದು ತೋರಿಸಲು ಮತ್ತು ವಿಧ್ಯುತ್ ಚ್ಛಕ್ತಿ ಬಿಲ್ಲನ್ನು ಕಟ್ಟಿದ ಬಗ್ಗೆ ನಾನು ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ನಿಜ. ನಮ್ಮ ಭೂಸ್ವಾಧೀನ ಪಡಿಸಿಕೊಂಡ ಜಮೀನಿಗೆ ಯಾವುದೇ ನೀರಾವರಿಯ ಮೂಲ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಆ ಜಮೀನಿನಲ್ಲಿ ಯಾವುದೇ ನೀರಾವರಿ ಬೆಳೆಗಳನ್ನು ಬೆಳೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ನಿಪಿ 1 ರಿಂದ 5 ಇದು ನಮ್ಮ ಭೂಸ್ವಾ ಧೀನ ಪಡಿಸಿಕೊಂಡ ಜಮೀನು ಸರ್ವೆ ನಂ.80 ರದ್ದು ಅಲ್ಲ ಎಂದರೆ ನಿಜ. ಸಾಕ್ಷಿಯು ಅದು ಪಕ್ಕದ ಜಮೀನಿನ ಕ್ರಯ ಪತ್ರಗಳು ಎನ್ನುತ್ತಾರೆ. ನಿಪಿ 1 ರಿಂದ 5 ಇದು ಪಕ್ಕದ ಜಮೀನು ಎಂದು ತೋರಿಸಲು ಹುದಲಿ ಗ್ರಾಮ ನಕಾಶೆಯನ್ನು ನನಗೆ ಹಾಜರು ಮಾಡಲು ತೊಂದರೆ ಇಲ್ಲ ಎಂದರೆ ನಿಜ. ನಿಪಿ 1 ರಿಂದ 5 ರಲ್ಲಿ ಕಾಣಿಸಿದ ಎಲ್ಲಾ ಜಮೀನುಗಳನ್ನು ಸಕ್ಕರೆ ಕಾರ್ಖಾನೆಯವರು ಖರೀದಿಸಿದ್ದು ಅದು ಗೋಕಾಕ ಬೆಳಗಾವಿಯ ಮುಖ್ಯ ರಸ್ತೆಯ ಬದಿಯಲ್ಲಿ ಇದೆ ಎಂದರೆ ಸರಿಯಲ್ಲ. ನಿಪಿ 1 ರಿಂದ 3 ಕ್ರಯ ಪತ್ರದಲ್ಲಿ ಕಾಣಿಸಿದ ಜಮೀನುಗಳು ಬೆಳಗಾವಿ-ಗೋಕಾಕ ರಸ್ತೆಗೆ ಹೊಂದಿಕೊಂಡು ಇದೆ ಎಂದರೆ ನಿಜ. ಬೆಳಗಾವಿ ಶುಗರ್ಸ ಪ್ರಾ.ಲಿ. ಇವರು ಖರೀದಿಸಿದ ನಿಪಿ 4 ಮತ್ತು 5 ರಲ್ಲಿ ಕಾಣಿಸಿದ ಜಮೀನುಗಳು ಗೋಕಾಕ-ಬೆಳಗಾವಿ ರಸ್ತೆಯಲ್ಲಿ ಅಂದರೆ ಹುದಲಿಯಿಂದ ಹೋಗುವ ರಸ್ತೆಯಲ್ಲಿ ಇದೆ ಎಂದರೆ ನಿಜ. ನಿಪಿ 1 ರಿಂದ 5 ಕ್ರಯ ಪತ್ರಗಳಲ್ಲಿ ಕಾಣಿಸಿದ ಜಮೀನುಗಳು ಫಲವತ್ತಾದ ಜಮೀನುಗಳು ಎಂದರೆ ನಿಜ. ನಿಪಿ 6 ಮತ್ತು 7 ಇದು ಬಿಜಾಪೂರ ಜಿಲ್ಲೆಗೆ ಸಂಬಂಧ ಪಟ್ಟ ಇಳುವರಿ ದಾಖಲೆಗಳಾಗಿದ್ದರಿಂದ ಅದನ್ನು ಈ ಕೇಸಿಗೆ ಅಳವಡಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 8 ಮತ್ತು 9 ದಾಖಲೆಗಳು ಬಾಗಲಕೋಟೆಗೆ ಸಂಬಂಧ ಪಟ್ಟ ದಾಖಲೆಗಳು ಅವುಗಳನ್ನು ಸಹ ಪರಿಗಣಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಜಮೀನನ್ನು ಭೂಸ್ವಾ ಧೀನ ಪಡಿಸಿಕೊಂಡು ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುವ ಮೊದಲು ನೋಟಿಸ ನೀಡಿದ್ದರು ಎಂದರೆ ನಿಜ. ನಮ್ಮ ಭೂಸ್ವಾಧೀನ ಪಡಿಸಿಕೊಂಡ ಜಮೀನಿಗೆ ಭೂಸ್ವಾ ಧೀನಾದಿಚಿಕಾರಿಗಳು ಮತ್ತು ನೀರಾವರಿ ಇಲಾಖೆಯವರು ಬಂದು ಪರಿಶೀಲನೆ ಮಾಡಿ ಮೊಜಣಿ

ಮಾಡಿದ್ದರು ಎಂದರೆ ನಿಜ. ಭೂಸ್ವಾ ಧೀನಾಧಿಕಾರಿಗಳು ನಮ್ಮ ಜಮೀನನ್ನು ಪರಿಶೀಲನೆ ಮಾಡಿ ಅದರ ನೀರಾವರಿ ಮೂಲ, ಮಣ್ಣಿನ ತರ ಮತ್ತು ಬೆಳೆಗಳ ಬಗ್ಗೆ ಪರಿಶೀಲನೆ ಮಾಡಿದ ನಂತರ ಅವಾರ್ಡ ಮಾಡಿದ್ದರು ಎಂದರೆ ನಿಜ. ಸಾಕ್ಷಿಯು ಮುಂದುವರೆದು ಅವರು ಪರಿಶೀಲನೆ ಮಾಡಿದಾಗ ನಮ್ಮ ಜಮೀನಿನಲ್ಲಿ ಬೆಳೆ ಇತ್ತು ಎನ್ನುತ್ತಾರೆ. ಸಾಕ್ಷಿಯು ಮಂದುವರೆದು ಅವರು ಪರೀಶಿಲನೆ ಮಾಡಿದಾಗ ಕಬ್ಬಿನ ಬೆಳೆ ಇತ್ತು ಎನ್ನುತ್ತಾರೆ. ಭೂಸ್ವಾ ಧೀನಾಧಿಕಾರ ಮಾಡಿದ ಅವಾರ್ಡಿನ ಹಣ ನಾನು ಪಡೆದಿದ್ದೆನೆಂದರೆ ನಿಜ. ಪರಿಹಾರದ ಹಣ ಮಂಜೂರು ಮಾಡುವ ಮೊದಲು ನೀವು ಪರಿಹಾರದ ಹಣ ಕಡಿಮೆಯಾಗಿದೆ ಎಂದು ಲಿಖಿತ ತಕರಾರು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಆ ರೀತಿ ತಕರಾರು ಸಲ್ಲಿಸಿದ ಬಗ್ಗೆ ದಾಖಲಗಳನ್ನು ನಾನು ಹಾಜರು ಮಾಡಿಲ್ಲ. ಭೂಸ್ವಾಧೀನಾಧಿಕಾರಿಗಳು ನಮ್ಮ ಜಮೀನಿಗೆ ಕೊಟ್ಟ ಪರಹಾರದ ಹಣ ಸರಿಯಾಗಿದೆ ಮತು ಯೋಗ್ಯವಾಗಿದೆ ಎಂದರೆ ಸರಿಯಲ್ಲ. ನಮ್ಮ ಭೂಸ್ವಾ ಧೀನ ಪಡಿಸಿಕೊಂಡ ಜಮೀನಿನ ಕಿಮ್ಮತ್ತಿಗಿಂತ ಹೆಚ್ಚಿ ನ ಕಿಮ್ಮತ್ತನ್ನು ನಿರ್ಧರಿಸಿ ಭೂಸ್ವಾಧೀನಾಧಿಕಾರಿಗಳು ಯೋಗ್ಯ ಬೆಲೆಯನ್ನು ನಿಗದಿ ಪಡಿಸಿ ಹಣ ಕೊಟ್ಟರು ಸಹ ನಾನು ಇನ್ನು ಹೆಚ್ಚಿ ನ ಪರಿಹಾರದ ಹಣ ಪಡೆಯುವ ಉದ್ದೇಶದಿಂದ ಸುಳ್ಳು ರೆಫರೆನ್ಸ ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2ನೇ ಎದುರುದಾರ ಪರ ಮಾನ್ಯ ಶ್ರೀ.ಎಸ್ಎನ್ಜಿ ವಕೀಲರಿಂದಃ**

ಹುದಲಿಯಲ್ಲಿರುವ ನಮ್ಮ ಸರ್ವೆ ನಂ.80 ಎ.1 ಎಕರೆ 16 ಗುಂಟೆ ಬಳ್ಳಾರಿ ನಾಲಾ ಡ್ಯಾಂ ಸಲುವಾಗಿ ಬ್ಯಾಕ ವಾಟರನ ಸಲುವಾಗಿ ಭೂಸ್ವಾಧೀನ ಪಡೆಸಿಕೊಂಡರೆಂದರೆ ನಿಜ. 4(1) ನೋಟಿಫಿಕೇಶನನನ್ನು 13.08.2015 ರಲ್ಲಿ ಮಾಡಲಾಯಿತು ಎಂದರೆ ನಿಜ. ಈ ರೀತಿ 4(1) ನೋಟಿಫಿಕೇಶನ ಆದ ನಂತರ ಎಸ್ಎಲಒ ಮತ್ತು ನೀರಾವರಿ ನಿಗಮದವರು ನಮ್ಮ ಜಮೀನಿಗೆ ಬಂದು ಜಂಟಿ ಸರ್ವೆ ಮಾಡಿದರು ಎಂರದೆ ಸರಿಯಲ್ಲ. ನಮ್ಮ ಜಮೀನಿನ

ಭೂಸ್ವಾಧೀನದ ಸಂಬಂಧ ದಿನಾಂಕ 04.03.2022 ರಲ್ಲಿ ಅವಾರ್ಡ ಆಯಿತೆಂದರೆ ನಿಜ. ನನಗೆ ಅರ್ವಾಡ ನೋಟಿಸನ್ನು ದಿನಾಂಕ 07.04.2022 ರಂದು ನನಗೆ ನೀಡಲಾಯಿತು ಎಂದರೆ ನಿಜ. ಸದರಿ ನೋಟಿಸಿಗೆ ನಾನು ದಿನಾಂಕ 11.04.2022 ರಂದು ತಕರಾರು ಸಲ್ಲಿಸಿದ್ದೆನೆಂದರೆ ನಿಜ. ಬಳ್ಳಾರಿ ನಾಲಾದ ಡ್ಯಾಂ ನಿಂದ ಮಾಸ್ತಿಹೋಳಿ ಅಪ್ರೋಚ ರಸ್ತೆಯವರೆಗಿನ ಜಮೀನುಗಳನ್ನು ಬ್ಯಾಕವಾಟರಗೆ ಸಂಬಂಧ ಪಟ್ಟಂತೆ ಆ ಉದ್ದೇಶಕ್ಕಾಗಿ ಭೂಸ್ವಾಧೀನ ಪಡಿಸಕೊಳ್ಳಲಾಯಿತು ಎಂದರೆ ಸಾಕ್ಷಿಯು ಯಾವ ಏರಿಯಾದವರೆಗೆ ಭೂಸ್ವಾಧೀನ ಪಡಿಸಿಕೊಳ್ಳಲಾಯಿತು ನನಗೆ ಗೊತ್ತಿಲ್ಲ ಅದರೆ ಡ್ಯಾಂನ ಬ್ಯಾಕ ವಾಟರ ಸಲುವಾಗಿ ನಮ್ಮ ಪೂರ್ತಿ ಜಮೀನನ್ನು ಭೂಸ್ವಾ ಧೀನ ಪಡಿಸಲಾಯಿತು ಎನ್ನುತ್ತಾರೆ. ಅವಾರ್ಡಿನ ಟೇಬಲ ನಂ.1 ರಲ್ಲ್ ನಮೂದಿಸಿದ ಸರ್ವೆ ನಂಬರಗಳಾದ ಉದಾಃ 121, 71, 122, 68 ಇತ್ಯಾದಿ ಜಮೀನುಗಳೆಲ್ಲವೂ ನಿಮ್ಮ ಭೂಸ್ವಾ ಧೀನ ಪಡೆಸಿಕೊಂಡ ಸರ್ವೆ ನಂ. 80 ಜಮೀನಿನ ಆಜುಬಾಜು ಜಮೀನುಗಳು ಎಂದರೆ ಆ ಜಮೀನುಗಳು ಎಲ್ಲಿವೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಹುದಲಿ ಗ್ರಾಮದಲ್ಲಿರುವ ಜಮೀನುಗಳು ಒಂದೇ ತರಹದ ಮಣ್ಣಿನ ಜಮೀನುಗಳು ಎಂದರೆ ಸಾಕ್ಷಿಯು ಎಲ್ಲವೂ ಫಲವತ್ತಾದ ಮಣ್ಣಿನ ಜಮೀನುಗಳು ಎನ್ನುತ್ತಾರೆ. ಹುದಲಿ ಗ್ರಾಮದಲ್ಲಿ 2012 ರಿಂದ 2015 ರವರೆಗೆ ಸಾಕಷ್ಟು ಜಮೀನುಗಳ ಮಾರಾಟ ಆಗಿದೆ ಎಂದರೆ ನಿಜ. ಅವಾರ್ಡನ ಟೇಬಲ ನಂ.1 ರಲ್ಲಿ ನಮೂದಿಸಿದ ಜಮೀನುಗಳೆಲ್ಲವೂ 2012 ರಿಂದ 2015ನೇ ಸಾಲಿನಲ್ಲಿ ಮಾರಾಟವಾದ ಜಮೀನುಗಳು ಎಂದರೆ ನನಗೆ ಗೊತ್ತಿಲ್ಲ. ಅರ್ವಾಡಿನ ಟೇಬಲ ನಂ.1 ರಲ್ಲಿ ನಮೂದಿಸಿದ ಎಲ್ಲಾ ಜಮೀನುಗಳು ನಮ್ಮ ಭೂಸ್ವಾ ಧೀನ ಪಡಿಸಿಕೊಂಡ ಆಜುಬಾಜು ಇದ್ದ ಜಮೀನುಗಳು ಮತ್ತು ಒಂದೇ ತರಹದ ಮಣ್ಣಿನ ಜಮೀನುಗಳು ಎಂದರೆ ಅದು ನನಗೆ ಹೇಳಲಾಗುವುದಿಲ್ಲ ಎನ್ನುತ್ತಾರೆ. ಅವಾರ್ಡಿನ ಟೇಬಲ ನಂ.1 ರಲ್ಲಿ ನಮೂದಿಸಿದ ಜಮೀನುಗಳು ನಮ್ಮ ಭೂಸ್ವಾಧೀನವಾದ ಜಮೀನು ಒಂದೇ ತರಹನಾಗಿದ್ದರಿಂದ ಭೂಸ್ವಾಧೀನ ಅಧಿಕಾರಿಗಳು ಆ ಕ್ರಯ ಪತ್ರದ ಆಧಾರದ ಮೇಲೆ ನಿರ್ಧರಿಸಿದ ಮಾರುಕಟ್ಟೆ ಬೆಲೆಯು ಯೋಗ್ಯ ಬೆಲೆ ಎಂದರೆ

ಸರಿಯಲ್ಲ. ಭೂಸ್ವಾ ಧೀನ ಅಧಿಕಾರಿಗಳು 2012 ರಿಂದ 2015 ಸಾಲಿನವರೆಗೆ ಮಾರಾಟವಾದ ಜಮೀನುಗಳ ಆಧಾರದ ಮೇಲೆ ಮತ್ತು ಎಸ್‌ಆರ್ ರೇಟ ಆಧಾರದ ಮೇಲೆ ಎರಡನ್ನು ತಾಳೆ ಮಾಡಿ ಅದರಲ್ಲಿ ಹೆಚ್ಚಿ ನ ಬೆಲೆ ರೂ.7,33,728/- ಗಳನ್ನು ನೀರಾವರಿ ಜಮೀನಿಗೆ ನಿರ್ಧರಣೆ ಮಾಡಿದ್ದು ಯೋಗ್ಯ ಬೆಲೆ ಎಂದರೆ ಸರಿಯಲ್ಲ. ನಮ್ಮ ಭೂಸ್ವಾಧೀನ ಪಡಿಸಿಕೊಂಡ ಜಮೀನಿನ ಪ್ರಿಲಿಮಿನರಿ ನೋಟಿಫಿಕೇಶನ 2015 ರಲ್ಲಿ ಆಯಿತು ಎಂದರೆ ಸರಿಯಲ್ಲ. ನಿಪಿ 2,4 ಮತ್ತು 5 ಇವುಗಳು 11(1) ನೋಟಿಫಿಕೇಶನ ಆದ ನಂತರ ಆದ ಖರೀದಿ ಪತ್ರ ಆಗಿದ್ದರಿಂದ ಅವುಗಳನ್ನು ನಮ್ಮ ಕೇಸಿಗೆ ಪರಿಗಣಿಸಲು ಬರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ 1 ರಲ್ಲಿ ಕಾಣಿಸಿದ ಸರ್ವೆ ನಂ.68/13, ನಿಪಿ 2 ರಲ್ಲಿ ನಮೂದಿಸಿದ ಸರ್ವೆ ನಂ.69/9ಇದು ಮತ್ತು ನಿಪಿ 3 ರಲ್ಲಿ ನಮೂದಿಸಿದ ಸರ್ವೆ ನಂ. 69/1 ಮತ್ತು 3 ಈ ಎಲ್ಲಾ ಜಮೀನುಗಳು ಹುದಲಿ ಗ್ರಾಮಕ್ಕೆ ಹತ್ತಿಕೊಂಡು ಇರುವ ಜಮೀನುಗಳು ಎಂದರೆ ಸಾಕ್ಷಿಯು ಅವುಗಳು ನಮ್ಮ ಭೂಸ್ವಾ ಧೀನ ಪಡಿಸಿಕೊಂಡ ಜಮೀನಿನ ಹತ್ತಿರ ಇರುವ ಜಮೀನುಗಳು ಎನ್ನುತ್ತಾರೆ. ನಿಪಿ 1 ರಿಂದ 3 ರಲ್ಲಿ ನಮೂದಿಸಿದ ಜಮೀನುಗಳು ನಿಮ್ಮ ಜಮೀನಿನ ಹತ್ತಿರದಲ್ಲಿ ಇತ್ತು ಎಂದು ತೋರಿಸಲು ದಾಖಲೆಗಳನ್ನು ನಿಮಗೆ ಹಾಜರು ಮಾಡಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ತೊಂದರೆ ಇಲ್ಲ ಎನ್ನುತ್ತಾರೆ. ನಿಪಿ 4 ಮತ್ತು 5 ರಲ್ಲಿ ಕಾಣಿಸಿದ ಜಮೀನುಗಳು ಶೂಗರ ಫ್ಯಾಕ್ಟರಿಯವರು ಖರೀದಿಸಿದ ಜಮೀನುಗಳು ಎಂದರೆ ನನಗೆ ಗೊತ್ತಿಲ್ಲ. ನಿಪಿ 4 ಮತ್ತು 5 ರಲ್ಲಿ ಕಾಣಿಸಿದ ಜಮೀನುಗಳು ವಾಣಿಜ್ಯ ಉದ್ದೇಶಕ್ಕಾಗಿ ಖರೀದಿ ಮಾಡಿದ್ದರಿಂದ ಅದರಲ್ಲಿ ಹೆಚ್ಚಿ ನ ಮೌಲ್ಯ ತೋರಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ 4 ಮತ್ತು 5 ರಲ್ಲಿ ಕಾಣಿಸಿದ ಸರ್ವೆ ನಂಬರಗಳಲ್ಲಿ ಸಕ್ಕರೆ ಕಾರ್ಖಾನೆಯ ಪ್ಲಾಂಟ ಮತ್ತು ಮಶೀನರಿ ಇರುವ ಪ್ರದೇಶಗಳು ಎಂದರೆ ಸಾಕ್ಷಿಯು ಇರಬಹುದು ಆದರೆ ನನಗೆ ಹೇಳಲಾಗುವುದಿಲ್ಲ ಎನ್ನುತ್ತಾರೆ. ನಿಪಿ 1 ರಿಂದ 3 ರಲ್ಲಿ ನಮೂದಿಸಿದ ಜಮೀನುಗಳು ಹುದಲಿ ಊರಿಗೆ ಸಮೀಪದಲ್ಲಿರುವುದರಿಂದ ಅವುಗಳನ್ನು ಹೆಚ್ಚಿ ನ ಬೆಲೆಗೆ ಖರೀದಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ 6 ಇದು

ಬಿಜಾಪುರ ಜಿಲ್ಲೆಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. ನಿಪಿ 10 ಹುದಲಿ ಗ್ರಾಮದ ಎಸ್‌ಎಲ್ ಒ ರವರು ನೀಡಿದ ಸೆಲ್ಸ ಸ್ಟ್ಯಾಟಿಸ್ಟಿಕ್ಸನಲ್ಲಿ ತೋರಿಸಿದ ಜಮೀನುಗಳು ಮತ್ತು ಭೂಸ್ವಾಧೀನಾಧಿಕಾರಿ ತಮ್ಮ ಅವಾರ್ಡಿನಲ್ಲಿ ತೋರಿಸಿದ ಜಮೀನುಗಳು ಒಂದೇ ತರನಾದುದೆಂದರೆ ಸರಿಯಲ್ಲ. ಹುದಲಿ ಊರಿನಿಂದ ನಿಮ್ಮ ಭೂಸ್ವಾಧೀನವಾದ ಜಮೀನು ಪಶ್ಚಿಮ ದಿಕ್ಕಿಗೆ 2 ಕಿ.ಮೀ ದೂರವಾಗುತ್ತದೆ ಎಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. ನಾನು ಹಾಜರು ಮಾಡಿದ ನಿಪಿ 1 ರಿಂದ 5ರಲ್ಲಿ ಕಾಣಿಸಿದ ಜಮೀನುಗಳೆಲ್ಲವೂ ನಮ್ಮ ಭೂಸ್ವಾಧೀನವಾದ ಜಮೀನಿಂದ 4 ರಿಂದ 5 ಕಿ.ಮೀ ದೂರವಾಗುತ್ತವೆ ಎಂದರೆ ಸರಿಯಲ್ಲ. ಬೆಳಗಾವಿ ಶುಗರ್ಸ ಫ್ಯಾಕ್ಟರಿಯು ಹುದಲಿ ಊರಿನ ದಕ್ಷಿಣಕ್ಕೆ ಹುದಲಿ ಊರಿಗೆ ತಾಗಿಕೊಂಡು ಇದೆ ಎಂದರೆ ಸಾಕ್ಷಿಯು ಹುದಲಿ ಊರಿನಿಂದ ದಕ್ಷಿಣಕ್ಕೆ 2 ಕಿ.ಮೀ ದೂರದಲ್ಲಿದೆ ಎನ್ನುತ್ತಾರೆ. ಹುದಲಿ ಊರಿನಿಂದ ಬೆಳಗಾಂವ ಸಕ್ಕರೆ ಕಾರ್ಖಾನೆವರೆಗೂ ರಸ್ತೆಯ ಇಕ್ಕಲೆಗಳಲ್ಲಿ ಅಂಗಡಿಗಳು ಮತ್ತು ವಾಸದ ಮನೆಗಳು ಇವೆ ಎಂದರೆ ಸರಿಯಲ್ಲ. ನಿಪಿ 1 ರಿಂದ 5 ರಲ್ಲಿ ನಮೂದಿಸಿದ ಜಮೀನುಗಳೆಲ್ಲವೂ ಹುದಲಿ ಊರಿಗೆ ತಾಗಿಕೊಂಡೆ ಇರುವುದರಿಂದ ಅಲ್ಲಿ ಜಮೀನಿನ ಬೆಲೆ ತುಂಬಾ ಜಾಸ್ತಿ ಇದೆ ಎಂದರೆ ಸರಿಯಲ್ಲ. ನಮ್ಮ ಭೂಸ್ವಾಧೀನ ಪಡಿಸಿಕೊಂಡ ಜಮೀನಿನಲ್ಲಿದ್ದ ಒಂದು ಸಾಗವಾನಿ ಮರ, ಒಂದು ಮಾವಿನ ಮರ ಮತ್ತು ಒಂದು ಗೇರು ಬೀಜದ ಗಿಡ ಇವುಗಳಿಗೆ ಹಾರ್ಟಿಕಲ್ಚರ ಕಚೇರಿಯ ಮೂಲಕ ಮೌಲ್ಯ ಮಾಪನ ಮಾಡಿ ಅದಕ್ಕೆ ಪರಿಹಾರದ ಹಣ ಕೊಡಲಾಗಿದೆ ಎಂದರೆ ಸರಿಯಲ್ಲ. ನಮ್ಮ ಭೂಸ್ವಾಧೀನವಾದ ಜಮೀನಿನಲ್ಲಿದ್ದ ಒಂದು ಗುಡಿಸಲಿಗೂ ಮೌಲ್ಯ ಮಾಪನ ಮಾಡಿ ಪರಿಹಾರದ ಹಣ ನೀಡಲಾಗಿದೆ ಎಂದರೆ ಸರಿಯಲ್ಲ. ಭೂಸ್ವಾಧೀನ ಅಧಿಕಾರಿಗಳು ತಾವು ಮಾಡಿ ಅವಾರ್ಡಿನಲ್ಲಿ ನಮ್ಮ ಭೂಸ್ವಾಧೀನ ಪಡಿಸಿದ ಜಮೀನಿಗೆ ಇದ್ದ ಬೆಲೆಯನ್ನೇ ನಮ್ಮ ಜಮೀನಿನಂತೆ ಇತರರು ಜಮೀನು ಮಾರಾಟ ಮಾಡಿದ ಬೆಲೆ ಆಧಾರದ ಮೇಲೆ ಮತ್ತು ಎಸ್‌ಆರ್ ಮೌಲ್ಯದ ಅಧಾರದ ಮೇಲೆ ಹೆಚ್ಚಿನ ಯೋಗ್ಯ ಪರಿಹಾರದ ಹಣವನ್ನು ಅವಾರ್ಡ ಮಾಡಿದ್ದರು ನಾನು ಹೆಚ್ಚಿನ ಪರಿಹಾರದ ಹಣ ಪಡೆಯುವ ಉದ್ದೇಶದಿಂದ ಅದು ಯೋಗ್ಯ ಬೆಲೆ ಅಲ್ಲವೆಂದು ನಿಪಿ 1 ರಿಂದ

5 ವಾಣಿಜ್ಯ ಉಪಯೋಗಕ್ಕೆ ಮಾರಾಟವಾದ ಜಮೀನುಗಳ ಬೆಲೆಯನ್ನು ಅಧರಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ಯಾರಾ 3 ರಿಂದ 17 ರಲ್ಲಿ ಹೇಳಿರುವ ಎಲ್ಲ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನಾನು ನನ್ನ ಭೂಸ್ವಾಧೀನ ಪಡಿಸಿದ ಜಮೀನಿಗೆ ಸಮಾನವಾದ ಬೆಲೆವುಳ್ಳ ಯಾವುದೇ ಕಾಗದ ಪತ್ರ ಹಾಜರು ಮಾಡದೇ ನಿಪಿ 1 ರಿಂದ 5 ಸುಳ್ಳು ಕ್ರಯ ಪತ್ರಗಳನ್ನು ಆಧರಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಈ ಕೇಸಿನಲ್ಲಿ ಸಾಕ್ಷಿ ನುಡಿಯಲು ಯಾವುದೇ ಅಧಿಕಾರ ಇಲ್ಲದೇ ಇದ್ದರೂ ನಿಪಿ-13 ನ್ನು ಸೃಷ್ಟಿಸಿ ತಂದು ಹಾಜರು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನು ನನಗೆ ಯಾವುದೇ ರೀತಿಯಲ್ಲಿ ಅಧಿಕಾರ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ನ್ಯಾಯಾಲಯಕ್ಕೆ ಬಂದು ಹಾಜರಾಗಿ ಸಾಕ್ಷಿ ನುಡಿಯಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನಾನು ಸತ್ಯಾಂಶವನ್ನು ಮುಚ್ಚಿ ಇಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4ನೇ ಅಧಿಕ ಸತ್ರ ನ್ಯಾಯಾಧೀಶರು ಮತ್ತು ಸೆಶೆನ್ಸ ನ್ಯಾಯಾಧೀಶರು,
ಬೆಳಗಾವಿ.